**ಅತ್ಯಾದ್ಯತೆ**

ಶಿಕ್ಷಣದ ಹಕ್ಕು

ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ
**ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು – 560 001**

ಸಂಖ್ಯೆ: ಸಶಿಅ/ಒಒಎಸ್‌ಸಿ/ಸುತ್ತೋಲೆ/01/2017–18 ದಿನಾಂಕ: 6.05.2017

# ಸುತ್ತೋಲೆ

**ವಿಷಯ:** 2017–18ನೇ ಸಾಲಿನಲ್ಲಿ **ವಿಶೇಷ ದಾಖಲಾತಿ ಆಂದೋಲನ ಹಾಗೂ ಸಾಮಾನ್ಯ ದಾಖಲಾತಿ ಆಂದೋಲನ ನಡೆಸುವ** ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶಿಕ್ಷಣ ಹಕ್ಕು ಕಾಯ್ದೆಯು ಏಪ್ರಿಲ್ 2010ರಿಂದ ಜಾರಿಗೆ ಬಂದಿರುತ್ತದೆ. ಈ ಕಾಯ್ದೆಯ ಪ್ರಕಾರ ಶಿಕ್ಷಣವು ಪ್ರತ್ರಿಯೊಂದು ಮಗುವಿನ ಮೂಲಭೂತ ಹಕ್ಕಾಗಿರುತ್ತದೆ. ಎಲ್ಲಾ ಮಕ್ಕಳಿಗೂ ಗುಣಾತ್ಮಕ ಶಿಕ್ಷಣವನ್ನು ಒದಗಿಸುವುದು ಸರ್ಕಾರದ, ಪೋಷಕರ ಮತ್ತು ನಮ್ಮೆಲ್ಲರ ಕರ್ತವ್ಯವಾಗಿರುತ್ತದೆ. 6 ರಿಂದ 14 ವಯೋಮಾನದ ಎಲ್ಲಾ ಮಕ್ಕಳಿಗೆ ಯಾವುದೇ ತಾರತಮ್ಯವಿಲ್ಲದೆ ಕಡ್ಡಾಯ ಮತ್ತು ಉಚಿತ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವುದು, ಎಲ್ಲಾ ಮಕ್ಕಳು ಕಡ್ಡಾಯವಾಗಿ ಶಾಲೆಗೆ ದಾಖಲಾಗುವುದು ಹಾಗೂ ದಾಖಲಾದ ಎಲ್ಲಾ ಮಕ್ಕಳು ಶಾಲೆಯಲ್ಲಿ ಉಳಿಯಬೇಕು ಎನ್ನುವುದು ಶಿಕ್ಷಣ ಹಕ್ಕು ಕಾಯ್ದೆಯ ಮುಖ್ಯ ಉದ್ದೇಶವಾಗಿದೆ.

ಡಿಸೆಂಬರ್ 2016ರಲ್ಲಿ ನಡೆಸಲಾದ ಸಮೀಕ್ಷೆಯಲ್ಲಿ 8318 ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಲಾಗಿದೆ. **ಶಾಲೆಯಿಂದ ಹೊರಗುಳಿದ ಈ ಎಲ್ಲಾ ಮಕ್ಕಳನ್ನು ಶಾಲಾ ಶಿಕ್ಷಣದ ಮುಖ್ಯವಾಹಿನಿಗೆ ತರುವುದು ದಾಖಲಾತಿ ಆಂದೋಲನದ ಮುಖ್ಯ ಉದ್ದೇಶವಾಗಿದೆ**. ಇದರೊಂದಿಗೆ ಅರ್ಹ 5 ವರ್ಷ 10 ತಿಂಗಳು ವಯೋಮಾನದ ಎಲ್ಲಾ ಮಕ್ಕಳನ್ನು ಗುರುತಿಸಿ ನೇರವಾಗಿ ಶಾಲೆಗೆ ದಾಖಲಿಸುವುದು ಹಾಗೂ ಶಾಲೆಗೆ ಬರುತ್ತಿರುವ ಎಲ್ಲಾ ಮಕ್ಕಳನ್ನು ಶಾಲಾ ಪ್ರಾರಂಭದ ದಿನದಂದೇ ಶಾಲೆಗೆ ಹಾಜರಾಗುವಂತೆ ಮಾಡುವ ಉದ್ದೇಶದಿಂದ ದಾಖಲಾತಿ ಆಂದೋಲನವನ್ನು ಹಮ್ಮಿಕೊಳ್ಳಬೇಕಾಗಿರುತ್ತದೆ. ಈ ಪ್ರಯುಕ್ತ ಉಪನಿರ್ದೇಶಕರು(ಆಡಳಿತ) ರವರು ವೈಯಕ್ತಿಕ ಕಾಳಜಿ ವಹಿಸಿ ಈ ಕೆಳಕಂಡಂತೆ ದಾಖಲಾತಿ ಆಂದೋಲನಕ್ಕೆ ಸಿದ್ಧತೆ ಮಾಡಿಕೊಂಡು ಕಾರ್ಯ ನಿರ್ವಹಿಸುವುದು.

**1.0 ವಿಶೇಷ ದಾಖಲಾತಿ ಆಂದೋಲನ– ದಿನಾಂಕ: 16.05.2017 ರಿಂದ 31.05.2017ರವರೆಗೆ**

ಈ ಕೆಳಕಂಡಂತೆ ವಿಶೇಷ ದಾಖಲಾತಿ ಆಂದೋಲನ ಕಾರ್ಯಕ್ರಮದಲ್ಲಿ ಚಟುವಟಿಕೆಗಳನ್ನು ಆಯೋಜಿಸುವುದು.

1.1 ವಿಶೇಷ ದಾಖಲಾತಿ ಆಂದೋಲನವನ್ನು ಜನವಸತಿ/ಶಾಲೆ/ಕ್ಲಸ್ಟರ್/ಬ್ಲಾಕ್/ಜಿಲ್ಲಾ ಹಂತದಲ್ಲಿ ತಪ್ಪದೆ ಆಯೋಜಿಸುವುದು.

1.2 ದಾಖಲಾತಿ ಆಂದೋಲನದ ಬಗ್ಗೆ ಎಲ್ಲಾ ಸ್ಥಳೀಯ ದಿನ ಪತ್ರಿಕೆಗಳಲ್ಲಿ ಪ್ರಕಟಣೆ ನೀಡುವುದು, ಎತ್ತಿನ ಗಾಡಿ, ಆಟೋಗಳ ಮೂಲಕ ವ್ಯಾಪಕ ಪ್ರಚಾರ ಕೈಗೊಳ್ಳುವುದು.ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಸರ್ಕಾರ ಜಾರಿಗೆ ತಂದಿರುವ ಯೋಜನೆಗಳು ಹಾಗೂ ಒದಗಿಸುತ್ತಿರುವ ಸೌಲಭ್ಯಗಳ (ಉಚಿತ ಪಠ್ಯಪುಸ್ತಕ,ಸಮವಸ್ತ್ರ,ಮಧ್ಯಾಹ್ನ ಉಪಹಾರ ಯೋಜನೆ, ಕ್ಷೀರ ಭಾಗ್ಯ, ಶೂ, ಸಾಕ್ಸ್ ವಿತರಣೆ, ಬೈಸಿಕಲ್ ವಿತರಣೆ,ವಿದ್ಯಾರ್ಥಿ ವೇತನ, ಜಿಲ್ಲೆಯಲ್ಲಿ ಲಭ್ಯವಿರುವ ಉಚಿತ ವಸತಿ ನಿಲಯಗಳು ಇತ್ಯಾದಿ) ಕುರಿತು ವ್ಯಾಪಕ ಪ್ರಚಾರಕ್ಕಾಗಿ ಕರಪತ್ರ, ಭಿತ್ತಿಪತ್ರ, ಡೋರ್‌ಸ್ಟಿಕ್ಕರ್ಸ್ ಹಾಗೂ ಬ್ರೋಚರ್‌ಗಳನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಸಿದ್ಧಪಡಿಸಿ ಶಾಲೆ/ಗ್ರಾಮ/ಕ್ಲಸ್ಟರ್/ಬ್ಲಾಕ್/ಜಿಲ್ಲೆಯ ಜನಸಂದಣಿಯಿರುವ ಸ್ಥಳಗಳಲ್ಲಿ ಪ್ರಕಟಿಸುವುದು. (ಉದಾ: ಶಾಲೆ/ಗ್ರಾಮಪಂಚಾಯಿತಿ/ಕಾರ್ಪೋರೇಷನ್/ಬ್ಯಾಂಕ್/ಅಂಚೆ ಕಛೇರಿ/ ಮಾರುಕಟ್ಟೆ/ ಆಸ್ಪತ್ರೆ/ಚಿತ್ರಮಂದಿರ/ ಬಸ್– ರೈಲ್ವೆ ನಿಲ್ದಾಣ ಇತ್ಯಾದಿ)

1.3 ಈ ಅವಧಿಯಲ್ಲಿ ಪ್ರತಿದಿನ ಶಾಲಾ ಶಿಕ್ಷಕರು, ಎಸ್.ಡಿಎಂ.ಸಿ. ಸದಸ್ಯರು, ಶಿಕ್ಷಣಾಸಕ್ತರು ಮತ್ತು ಲಭ್ಯವಿರುವ ಶಾಲಾ ಮಕ್ಕಳೊಂದಿಗೆ ಗ್ರಾಮದಲ್ಲಿ ಬ್ಯಾನರ್‌ನೊಂದಿಗೆ ಜಾಥಾ ನಡೆಸಿ, ಘೋಷಣೆಗಳ ಮೂಲಕ ಸಮುದಾಯದಲ್ಲಿ ಅರಿವು ಮೂಡಿಸುವುದು.

1.4 ಸಂಜೆ ವೇಳೆಯಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಯಕ್ಷಗಾನ, ಹರಿಕಥೆ, ಜಾನಪದ ಗೀತೆ, ಸಾಕ್ಷ್ಯ ಚಿತ್ರಗಳ(Documentaries) ಪ್ರದರ್ಶನ, ಬೀದಿನಾಟಕ ಇತ್ಯಾದಿ ಕಾರ್ಯಕ್ರಮಗಳನ್ನು ಆಯೋಜಿಸುವುದರ ಮೂಲಕ ಶಿಕ್ಷಣದ ಮಹತ್ವದ ಬಗ್ಗೆ ಅರಿವು ಮೂಡಿಸುವುದು.

1.5 ಶಾಲಾ ವ್ಯಾಪ್ತಿಯ ಜನವಸತಿ ಪ್ರದೇಶದ ಎಲ್ಲಾ ಮನೆಗಳಿಗೆ ಮುಖ್ಯ ಶಿಕ್ಷಕರು/ಶಿಕ್ಷಕರು/ಎಸ್.ಡಿ.ಎಂ.ಸಿ./ಗ್ರಾಮ ಪಂಚಾಯಿತಿ ಸದಸ್ಯರು ಶಾಲೆಗೆ ದಾಖಲಾಗಿ ವ್ಯಾಸಂಗ ಮಾಡುತ್ತಿರುವ ಮಕ್ಕಳು ಶಾಲಾ ಪ್ರಾರಂಭದ ದಿನವೇ ಶಾಲೆಗೆ ಹಾಜರಾಗುವಂತೆ ಪೋಷಕರೊಂದಿಗೆ ಸಮಾಲೋಚನೆ ನಡೆಸಿ ಖಚಿತಪಡಿಸಿಕೊಳ್ಳಬೇಕು. 5 ವರ್ಷ 10 ತಿಂಗಳು ವಯೋಮಾನದ ಎಲ್ಲಾ ಮಕ್ಕಳನ್ನು ಒಂದನೇ ತರಗತಿಗೆ ಕಡ್ಡಾಯವಾಗಿ ದಾಖಲಾತಿ ಮಾಡುವುದು.

1.6 ದಾಖಲಾತಿ ಆಂದೋಲನ ಕಾರ್ಯಕ್ರಮದಲ್ಲಿ ಗ್ರಾಮದ ವಿದ್ಯಾವಂತ ಯುವಕ/ಯುವತಿಯರ ಸಂಘ, ಸ್ಥಳೀಯ ಸ್ವಯಂ ಸೇವಾ ಸಂಘಗಳು,ಸರ್ಕಾರೇತರ ಸಂಸ್ಥೆಗಳು, ವಿವಿಧ ಇಲಾಖೆಗಳ ಸಿಬ್ಬಂದಿ ಹಾಗೂ ಸಾರ್ವಜನಿಕರು ಭಾಗವಹಿಸುವಂತೆ ಕ್ರಮತೆಗೆದುಕೊಳ್ಳುವುದು

1.7 ಶಾಲೆಯಿಂದ ಹೊರಗುಳಿದಂತಹ ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರಲು ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮ ಅನುಷ್ಠಾನದ ಬಗ್ಗೆ ಎಸ್.ಡಿ.ಎಂ.ಸಿ. ಸಭೆ, ಗ್ರಾಮ ಸಭೆ, ಗ್ರಾಮಪಂಚಾಯಿತಿ/ತಾಲ್ಲೂಕು ಪಂಚಾಯಿತಿ ಸಭೆಗಳನ್ನು ನಡೆಸಿ,ಚರ್ಚಿಸಿ ಕ್ರಿಯಾಯೋಜನೆ ತಯಾರಿಸುವುದು. ಸಭೆ ನಡೆಸಿದ ಬಗ್ಗೆ ನಡವಳಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಸಲ್ಲಿಸುವುದು.

1.8 ಜಿಲ್ಲಾ ಪಂಚಾಯಿತಿ ಸಭೆಯಲ್ಲಿ ವಿಶೇಷ ದಾಖಲಾತಿ ಆಂದೋಲನ ಕೈಗೊಂಡಿರುವ ಬಗ್ಗೆ ಹಾಗೂ ಮಕ್ಕಳನ್ನು ಶಾಲೆಗೆ ದಾಖಲಾತಿ ಮಾಡುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು. ತಮ್ಮ ವ್ಯಾಪ್ತಿಯಲ್ಲಿ ಈ ಕಾರ್ಯಕ್ರಮ ನಡೆಯುತ್ತಿರುವ ಸಂದರ್ಭದಲ್ಲಿ ಭಾಗವಹಿಸುವುದು

1.9 ಶಿಕ್ಷಣ ಇಲಾಖೆಯ ಜೊತೆಗೆ ಸಮಾಜಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕಂದಾಯ ಇಲಾಖೆ, ಎನ್.ಜಿ.ಒ, ಎಸ್.ಡಿ.ಎಂ.ಸಿ., ಸ್ಥಳಿಯ ಯುವಕ/ಯುವತಿ ಸಂಘ, ಇವರೆಲ್ಲರೂ ಒಳಗೊಂಡಂತೆ ಒಂದು Task force ರಚಿಸಿ, ಪೋಷಕರೊಂದಿಗೆ ಮಕ್ಕಳು ವಲಸೆ ಬಂದಂತಹ ಸ್ಥಳಗಳಿಗೆ ಭೇಟಿ ನೀಡಿ,ವಲಸೆ ಹೋಗುವ/ಬರುವ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಮನವೊಲಿಸಲು ಪ್ರಯತ್ನಿಸುವುದು. ಈ ಕಾರ್ಯಕ್ಕೆ ಆಯಾ ಭಾಷೆ ಮಾತನಾಡುವ ಶಿಕ್ಷಕರ ಅಥವಾ ಸ್ಥಳೀಯರ ಸಹಕಾರ ಪಡೆಯುವುದು.

1.10 ಕೃಷಿ ಮತ್ತು ಕೃಷಿಯೇತರ ಕ್ಷೇತ್ರಗಳಲ್ಲಿ ದಿನಗೂಲಿ ಕಾರ್ಯನಿರ್ವಹಿಸುತ್ತಿರುವ ಪೋಷಕರು ಹಾಗೂ ಇವರ ಮಕ್ಕಳ ಪಟ್ಟಿಯನ್ನು ಸಮೀಕ್ಷೆ ಸಂದರ್ಭದಲ್ಲಿ ತಯಾರಿಸಿ ಶಾಲೆಗಳಲ್ಲಿ ನಿರ್ವಹಿಸಲಾಗಿದೆ. ಈ ಪಟ್ಟಿ ಆಧರಿಸಿ ಹೊಲ ಗದ್ದೆಗಳು, ಅಂಗಡಿಗಳು, ಹೋಟೆಲ್‌ಗಳು, ಇಟ್ಟಿಗೆ ತಯಾರಿಕೆ ಸ್ಥಳ, ಸುಣ್ಣದ ಭಟ್ಟಿ, ಕಟ್ಟಡ ಕಾಮಗಾರಿ ನಡೆಯುವ ಸ್ಥಳ ಇತ್ಯಾದಿ ಕೃಷಿ ಮತ್ತು ಕೃಷಿಯೇತರ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಕ್ಕಳ ಪೋಷಕರನ್ನು ಮತ್ತು ಸಂಬಂಧಿತ ಮಾಲೀಕರನ್ನು ಭೇಟಿ ಮಾಡಿ ಅವರೊಂದಿಗೆ ಚರ್ಚಿಸಿ, ದಿನಗೂಲಿ ಮಾಡುತ್ತಿರುವ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಕಳುಹಿಸುವಂತೆ ಮನವೊಲಿಸಿ, ಕ್ರಮವಹಿಸುವುದು.

1.11 ಮದರಸಗಳಲ್ಲಿ ಕಲಿಯುತ್ತಿರುವ ಮಕ್ಕಳು ಹಾಗೂ ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಶಾಲಾ ಮುಖ್ಯ ವಾಹಿನಿಗೆ ತರಲು ಧಾರ್ಮಿಕ ಮುಖಂಡರ ಸಹಕಾರದೊಂದಿಗೆ ಮಸೀದಿಗಳ ಪ್ರಾರ್ಥನಾ ಸಮಯದಲ್ಲಿ ಶಿಕ್ಷಣದ ಮಹತ್ವ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ಕೈಗೊಳ್ಳುವುದು.

1.12 ಬಾಲ್ಯ ವಿವಾಹ ಅಥವಾ ಇನ್ನಿತರೆ ಕಾರಣಗಳಿಂದ ಮಕ್ಕಳು ಶಾಲೆ ಬಿಟ್ಟಿದ್ದಲ್ಲಿ, ಅಂತಹ ಮಕ್ಕಳನ್ನು ಮತ್ತು ಅವರ ಪೋಷಕರನ್ನು ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಪ್ರಾಥಮಿಕ ಆರೋಗ್ಯ ಘಟಕದ ಆರೋಗ್ಯ ಕಾರ್ಯಕರ್ತೆಯರ ಸಹಾಯ ಪಡೆದು ಮನವೊಲಿಸಿ ಶಾಲಾ ವ್ಯಾಪ್ತಿಗೆ ತರುವುದು.

**2.0 ಸಾಮಾನ್ಯ ದಾಖಲಾತಿ ಆಂದೋಲನ : 01-06-2017 ರಿಂದ 30-06-2017 ರವರೆಗೆ**

ವಿಶೇಷ ದಾಖಲಾತಿ ಆಂದೋಲನ ಕಾರ್ಯಕ್ರಮದಲ್ಲಿ ಕೈಗೊಳ್ಳಲಾಗುವ ಮೇಲ್ಕಂಡ ಚಟುವಟಿಕೆಗಳ ಜೊತೆಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ 6 ರಿಂದ 14 ವಯೋಮಾನದ ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗುವುದನ್ನು ಖಾತರಿಪಡಿಸಿಕೊಳ್ಳುವುದು.

2.1 ಶಾಲೆಗೆ ದಾಖಲಾದ ಎಲ್ಲಾ ಮಕ್ಕಳಿಗೂ ಶಾಲಾ ಪ್ರಾರಂಭವಾದ ಒಂದು ವಾರದೊಳಗೆ ಸರ್ಕಾರದ ವತಿಯಿಂದ ನೀಡಲಾಗುವ ಪಠ್ಯಪುಸ್ತಕ, ಸಮವಸ್ತ್ರ, ಶಾಲಾಬ್ಯಾಗ್, ಶೂ-ಸಾಕ್ಸ್‌ಗಳು, ನೋಟ್‌ಬುಕ್ ಹಾಗೂ ಲೇಖನ ಸಾಮಗ್ರಿಗಳನ್ನು ಒದಗಿಸುವುದು.

2.2 ವಿಶೇಷ ದಾಖಲಾತಿ ಆಂದೋಲನದ ಅವಧಿಯಲ್ಲಿ 5 ವರ್ಷ 10 ತಿಂಗಳು ವಯೋಮಾನದಿಂದ 14+ವಯೋಮಾನದವರೆಗಿನ ಮಕ್ಕಳು ಶಾಲಾ ಮುಖ್ಯವಾಹಿನಿಗೆ ಸೇರದೆ ಉಳಿದಿದ್ದಲ್ಲಿ, ಅಂತಹ ಮಕ್ಕಳ ಪಟ್ಟಿಯನ್ನು ಶಾಲಾವಾರು ತಯಾರಿಸಿಕೊಂಡು. ಈ ಮಕ್ಕಳನ್ನು ಮುಖ್ಯವಾಹಿನಿಗೆ ತರುವ ಕ್ರಿಯಾ ಯೋಜನೆ ರೂಪಿಸುವುದು. 5 ರಿಂದ 6ನೇ ತರಗತಿ ಮತ್ತು 8 ರಿಂದ 9ನೇ ತರಗತಿಗೆ ಉತ್ತೀರ್ಣರಾಗಿದ್ದು, ಶಾಲೆಗೆ ಹೋಗದೆ ಉಳಿದಿದ್ದಲ್ಲಿ ಇಂತಹ ಮಕ್ಕಳನ್ನು ಶಾಲೆಗೆ ಸೇರಿಸಲು ಕ್ರಮವಹಿಸುವುದು ಮತ್ತು ಖಾತರಿಪಡಿಸಿಕೊಳ್ಳುವುದು.

2.3 2015-16ನೆಯ ಸಾಲಿನಲ್ಲಿ 1 ರಿಂದ 8ನೆಯ ತರಗತಿಗಳಲ್ಲಿ ಓದುತ್ತಿದ್ದ ಎಲ್ಲಾ ಮಕ್ಕಳು 2016-17ನೆಯ ಸಾಲಿನಲ್ಲಿ ಮುಂದಿನ ತರಗತಿಗಳಿಗೆ ಅಂದರೆ 2 ರಿಂದ 9ನೇ ತರಗತಿಗಳಿಗೆ ದಾಖಲಾಗಿ ವ್ಯಾಸಂಗ ಮುಂದುವರೆಸಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು. ಒಂದು ವೇಳೆ ದಾಖಲಾಗದೇ ಉಳಿದಿರುವುದು ಕಂಡು ಬಂದಲ್ಲಿ ಅಂತಹ ಮಕ್ಕಳು (Drop out)ಶಾಲೆಯಿಂದ ಹೊರಗುಳಿಯದಂತೆ ಮುಖ್ಯವಾಹಿನಿಗೆ ತರಲು ಕಡ್ಡಾಯವಾಗಿ ಕ್ರಮವಹಿಸುವುದು.

2.4 ಇತರೆ ರಾಜ್ಯಗಳಿಂದ ಬಂದಂತಹ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (WCD) ನಡೆಸುತ್ತಿರುವ ಬಾಲಕ ಹಾಗೂ ಬಾಲಕಿಯರ ಬಾಲಮಂದಿರಗಳಲ್ಲಿ ವ್ಯವಸ್ಥೆಯನ್ನು ಕಲ್ಪಿಸುವುದು, ಅದರಂತೆ, ಬಾಲ ಕಾರ್ಮಿಕ ಮಕ್ಕಳಿಗಾಗಿ, ಕಾರ್ಮಿಕ ಇಲಾಖೆ ನಡೆಸುತ್ತಿರುವ ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆ (ಎನ್.ಸಿ.ಎಲ್.ಪಿ)ಯಡಿ ಶಾಲೆಗಳಿಗೆ ದಾಖಲಿಸುವುದು.

2.5 ಅಂಗನವಾಡಿ ಕಾರ್ಯಕರ್ತೆಯರ ಸಹಯೋಗದೊಂದಿಗೆ ಪೋಷಕರಿಗೆ ಚಿಕ್ಕ ಮಕ್ಕಳನ್ನು ಅಂಗನವಾಡಿ ಕೇಂದ್ರಗಳಲ್ಲಿ ಬಿಡುವಂತೆ ಹಾಗೂ ಶಾಲಾ ವಯಸ್ಸಿನ ಮಕ್ಕಳನ್ನು ಶಾಲೆಗೆ ಕಳುಹಿಸಲು ಪ್ರೇರೇಪಿಸುವುದು. ಇದಕ್ಕಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಲ್ಯಾಣ ಇಲಾಖೆಯನ್ನು ಸಂಪರ್ಕಿಸಿ ಅಗತ್ಯ ವ್ಯವಸ್ಥೆ ಮಾಡಿಕೊಳ್ಳುವುದು.

2.6 ಶಾಲಾ ಪ್ರಾರಂಭದ ನಂತರ ವಿವಿಧ ಕಾರಣಗಳಿಗಾಗಿ ಶಾಲೆಗೆ ಗೈರುಹಾಜರಾಗುವ (ಸತತವಾಗಿ 7 ದಿನಗಳ ಗೈರುಹಾಜರಿ) ಮಕ್ಕಳನ್ನು ಕೂಡಲೇ ಶಾಲೆಗೆ ಕರೆತರಲು ಶಾಲಾ ಮೀನಾ ತಂಡ, ಶಾಲಾ ಶಿಕ್ಷಕರು, ಎಸ್.ಡಿ.ಎಂ.ಸಿ ಪೋಷಕರು/ಗ್ರಾಮಸ್ಥರು, ಗ್ರಾಮಪಂಚಾಯಿತಿ/ಕಾರ್ಪೋರೇಷನ್ ಸದಸ್ಯರನ್ನೊಳಗೊಂಡ ಟಾಸ್ಕ್ ಫೋರ್ಸ್ ರಚಿಸಿಕೊಂಡು ಕಾರ್ಯ ನಿರ್ವಹಿಸುವುದು.

2.7 ಶಾಲಾಮುಖ್ಯವಾಹಿನಿಗೆ ತರಲಾದ ಶಾಲೆಬಿಟ್ಟ ಮಕ್ಕಳನ್ನು ಶಾಲಾ ಶಿಕ್ಷಕರು ದತ್ತುತೆಗೆದುಕೊಂಡು ಅವರು ನಿರಂತರವಾಗಿ ಶಿಕ್ಷಣ ಮುಂದುವರೆಸಲು ವೈಯಕ್ತಿಕ ಗಮನಹರಿಸಿ, ಮಾರ್ಗದರ್ಶನ ಮಾಡಿ, ಸದರಿ ಮಕ್ಕಳು ಗುಣಾತ್ಮಕ ಕಲಿಕೆ ಪಡೆಯಲು ಅಗತ್ಯವಾದ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಕ್ರಮಕೈಗೊಳ್ಳುವುದು.

**2.8 ಈ ಕಾರ್ಯವು ಜೂನ್ ಮಾಹೆಗೆ ಮಾತ್ರ ಸೀಮಿತವಾಗಿರದೇ ಇಡೀ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳು ಮುಖ್ಯವಾಹಿನಿಯಿಂದ ಹೊರಗುಳಿಯದಂತೆ ಕಣ್ಗಾವಲಾಗಿ ಕಾರ್ಯನಿರ್ವಹಿಸುವುದು.**

3.0 **ಗ್ರಾಮ ಪಂಚಾಯಿತಿಗೆ ನೋಡಲ್ ಅಧಿಕಾರಿಗಳು :-** ಪ್ರತಿ ಗ್ರಾಮ ಪಂಚಾಯಿತಿಗೆ ಒಬ್ಬರಂತೆ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡುವ ಬಗ್ಗೆ ಪ್ರತಿ ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಪತ್ರ ಬರೆದಿದ್ದು, ಅದರಂತೆ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಉಪನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ ಮತ್ತು ಪ್ರಾಂಶುಪಾಲರು, ಡಯಟ್ ಇವರುಗಳು ಡಿಸಿ ಮತ್ತು ಸಿಇಒ ರವರನ್ನು ಭೇಟಿ ಮಾಡಿ, ಪ್ರತಿ ಗ್ರಾಮ ಪಂಚಾಯಿತಿಗೆ ಒಬ್ಬರಂತೆ ಅಧಿಕಾರಿಗಳನ್ನು ನೋಡಲ್ ಅಧಿಕಾರಿ ಮಾಡಲು ಕ್ರಮಕೈಗೊಳ್ಳುವುದು. ಇವರುಗಳು ತಮಗೆ ವಹಿಸಿರುವ ಗ್ರಾಮ ಪಂಚಾಯಿತಿಯಲ್ಲಿ ಆಂದೋಲನ/ಮನೆ-ಮನೆ ಭೇಟಿ ನಡೆಯುತ್ತಿರುವ ಬಗ್ಗೆ ಉಸ್ತುವಾರಿ ನಿರ್ವಹಿಸುವುದು.

4.0 **ಗ್ರಾಮಪಂಚಾಯತ್ ಮಟ್ಟದಲ್ಲಿ ಸಭೆ:-** ದಿ:08.06.2017 ರಿಂದ ಪ್ರತಿ ಗ್ರಾಮ ಪಂಚಾಯತ್‌ನಲ್ಲಿ ನೋಡಲ್ ಅಧಿಕಾರಿಯವರ ನೇತೃತ್ವದಲ್ಲಿ ಆ ಪಂಚಾಯತ್ ವ್ಯಾಪ್ತಿಯ ಶಾಲೆಗಳ ಮುಖ್ಯ ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ ಸದಸ್ಯರುಗಳ ಸಭೆ ನಡೆಸಬೇಕು. ಜೂನ್ ಮೊದಲ ವಾರದಲ್ಲಿ ಮನೆ-ಮನೆ ಭೇಟಿಯಿಂದ ಕಂಡು ಬಂದಂತಹ ಅಂಕಿ-ಅಂಶಗಳ ಮೇಲೆ ಚರ್ಚೆ ಮಾಡಬೇಕು. ಹೊಸದಾಗಿ ಶಾಲೆಗೆ ಸೇರುವ ಮಕ್ಕಳ ಸಂಖ್ಯೆ ಎಷ್ಟು, 5 ರಿಂದ 6ನೇ ತರಗತಿಗಳಿಗೆ ಬೇರೆ ಶಾಲೆಗಳಿಗೆ ದಾಖಲಾಗಿರುವ ಮಕ್ಕಳ ಸಂಖ್ಯೆ ಮತ್ತು 7/8 ನೇ ತರಗತಿಯಿಂದ 8/9 ನೇ ತರಗತಿಗಳಿಗೆ ಬೇರೆ ಶಾಲೆಗಳಿಗೆ ದಾಖಲಾಗಿರುವ ಮಕ್ಕಳೆಷ್ಟು ಎಂಬ ವಿವರ ಕ್ರೋಢೀಕರಿಸಬೇಕು ಮತ್ತು ದಾಖಲಾಗದ/ಹಾಜರಾಗದ ಮಕ್ಕಳಿದ್ದಲ್ಲಿ ಅವರುಗಳನ್ನು ಕರೆತರಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವುದು. ಇದರೊಟ್ಟಿಗೆ ಶಾಲೆಗಳಲ್ಲಿನ ಭೌತಿಕ ಸ್ಥಿತಿಗತಿಗಳು, ಶೌಚಾಲಯ ಬಳಸುವ ಸ್ಥಿತಿಯಲ್ಲಿವೆಯೋ ಎಂದು ಗಮನಿಸಿ ಬಳಸುವ ಸ್ಥಿತಿಯಲ್ಲಿಲ್ಲದಿದ್ದರೆ, ಬಳಸುವ ಸ್ಥಿತಿಗೆ ತರುವ ಬಗ್ಗೆ ಯೋಜನೆ ತಯಾರಿಸಿಕೊಳ್ಳುವುದು. ಶಾಲೆಗಳಲ್ಲಿ ಈ ಶೈಕ್ಷಣಿಕ ವರ್ಷಕ್ಕೆ ಸಂಬಂಧಿಸಿದಂತೆ ವಾರ್ಷಿಕ ಯೋಜನೆ, ಶಿಕ್ಷಕರಿಗೆ ತರಗತಿ ವಿಷಯಗಳ ಹಂಚಿಕೆ, ಶೈಕ್ಷಣಿಕ ಯೋಜನೆಗಳ ತಯಾರಿ ಆಗಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.

5.0 **ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಶಾಲೆ ಆಯ್ಕೆ:-** ಪ್ರತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕನಿಷ್ಠ 400 ಕ್ಕಿಂತ ಹೆಚ್ಚು ದಾಖಲಾತಿ ಹೊಂದಿರುವ ಒಂದು ಶಾಲೆಯನ್ನು ಆಯ್ಕೆ ಮಾಡಿಕೊಂಡು, ಅಲ್ಲಿ ಸಮವಸ್ತ್ರ, ಪಠ್ಯಪುಸ್ತಕ ಮತ್ತು ಬೈಸಿಕಲ್‌ಗಳನ್ನು ಮಾನ್ಯ ವಿಧಾನಸಭಾ ಸದಸ್ಯರ ನೇತೃತ್ವದಲ್ಲಿ ವಿತರಿಸಲು **ಜೂನ್ ಮೊದಲನೇ ಅಥವಾ ಎರಡನೇ ವಾರದಲ್ಲಿ** ಒಂದು ದಿನಾಂಕವನ್ನು ನಿಗದಿಪಡಿಸಿಕೊಳ್ಳಬೇಕು. ಶಾಲೆ ಆಯ್ಕೆ ಮಾಡುವಾಗ ಒಂದೇ ಜನವಸತಿ ಪ್ರದೇಶದಲ್ಲಿ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಕಾಲೇಜುಗಳಿರುವಂತಹುದನ್ನು ಆಯ್ಕೆ ಮಾಡಿ ಕಾರ್ಯಕ್ರಮ ಆಯೋಜನೆ ಮಾಡಬೇಕು. ಈ ಕಾರ್ಯಕ್ರಮಕ್ಕೆ ಆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಎಲ್ಲಾ ಹಂತದ ಜನ ಪ್ರತಿನಿಧಿಗಳಿಗೂ ಆಹ್ವಾನ ನೀಡಿ ಹೆಚ್ಚಿನ ಸಂಖ್ಯೆಯಲ್ಲಿ ಪೋಷಕರು ಮತ್ತು ಮಕ್ಕಳು ಭಾಗವಹಿಸುವಂತೆ ನೋಡಿಕೊಳ್ಳುವುದು. ಈ ಸಂದರ್ಭದಲ್ಲಿ ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಸಿಗುತ್ತಿರುವ ಬಹುವರ್ಣದ ಆಕರ್ಷಕ ಮತ್ತು ಹೊರೆಯಿಲ್ಲದ ಪಠ್ಯಪುಸ್ತಕ, ಈ ವರ್ಷದಿಂದ 8 ರಿಂದ 10ನೇ ತರಗತಿ ಮಕ್ಕಳಿಗೆ ನೀಡುತ್ತಿರುವ ಚೂಡಿದಾರ್ ಸಮವಸ್ತ್ರ ಮತ್ತು ಬೈಸಿಕಲ್‌ಗಳ ಬಗ್ಗೆ ಪೋಷಕರಿಗೆ ಅರಿವು ಮೂಡಿಸಲು ವ್ಯವಸ್ಥೆ ಮಾಡುವುದು.

6.0 **ಮಧ್ಯಾಹ್ನದ ಬಿಸಿಯೂಟ ಮತ್ತು ಜುಲೈನಿಂದ ವಾರದಲ್ಲಿ '5' ದಿನಗಳ ಕ್ಷೀರಭಾಗ್ಯ ಸೌಲಭ್ಯ ವಿಸ್ತರಿಸಿರುವ ಬಗ್ಗೆ ತಿಳಿಸುವುದು.**

ಜೂನ್ ಎರಡನೇ ವಾರದಲ್ಲಿ ನಡೆದ ಸೌಲಭ್ಯಗಳ ವಿತರಣಾ ಸಮಾರಂಭದ ನಂತರ ಪ್ರತಿ ಶಾಲಾವಾರು ಮಕ್ಕಳ ದಾಖಲಾತಿಯಲ್ಲಿ ಆಗಿರುವ ಪ್ರಗತಿ ವಿತರಿಸಿರುವ ಸಮವಸ್ತ್ರ, ಪಠ್ಯಪುಸ್ತಕ ಮತ್ತು ಬೈಸಿಕಲ್ ವಿವರಗಳನ್ನು ಬ್ಲಾಕ್‌ವಾರು ಕ್ರೋಢೀಕರಿಸಿ, ನಂತರ ಜಿಲ್ಲಾವಾರು ಕ್ರೋಢೀಕರಣ ಮಾಡಿ ರಾಜ್ಯ ಕಚೇರಿಗೆ ಕಳುಹಿಸಿಕೊಡಬೇಕು. ಈ ಕಾರ್ಯದಲ್ಲಿ ವಿಭಾಗ, ಜಿಲ್ಲಾ, ಬ್ಲಾಕ್ ಮಟ್ಟದ ಎಲ್ಲಾ ಅಧಿಕಾರಿಗಳು ತಮ್ಮನ್ನು ತೊಡಗಿಸಿಕೊಂಡು ಮಕ್ಕಳಿಗೆ ಸಿಗಬೇಕಾದ ಗುಣಮಟ್ಟದ ಶಿಕ್ಷಣ ಸಿಗುವಂತೆ ನೋಡಿಕೊಳ್ಳಲು ಕಂಕಣಬದ್ಧರಾಗಬೇಕು.

7.0 **ಅನುದಾನದ ವಿವರ :-**

7.1 ಈ ಕಾರ್ಯಕ್ರಮದ ಪ್ರಚಾರ ಮತ್ತು ದಾಖಲೀಕರಣಕ್ಕಾಗಿ ಪ್ರತಿ ಶೈಕ್ಷಣಿಕ ಬ್ಲಾಕ್‌ಗೆ ಗರಿಷ್ಠ ರೂ 5000/- (ರೂ ಐದು ಸಾವಿರ ಮಾತ್ರ) ಮಿತಿಯೊಳಗೆ ಮಾಧ್ಯಮ ಮತ್ತು ದಾಖಲೀಕರಣದ ಅನುದಾನವನ್ನು ಬಳಸಿಕೊಳ್ಳಲು ತಿಳಿಸಿದೆ.

7.2 ಈ ಅನುದಾನವನ್ನು ಇದೇ ಉದ್ದೇಶಕ್ಕೆ ಬಳಸಿರುವ ಬಗ್ಗೆ ಬಳಕೆ ಪ್ರಮಾಣ ಪತ್ರವನ್ನು **ದಿ: 15.07.2017ರ ಒಳಗೆ** ಸರ್ವ ಶಿಕ್ಷಣ ಅಭಿಯಾನ ರಾಜ್ಯ ಕಚೇರಿಗೆ ಸಲ್ಲಿಸುವುದು.

8.0 **ಅನುಪಾಲನಾ ವರದಿ ಸಲ್ಲಿಸುವ ಕುರಿತು :-**

ವಿಶೇಷ ದಾಖಲಾತಿ ಆಂದೋಲನ ಹಾಗೂ ಸಾಮಾನ್ಯ ದಾಖಲಾತಿ ಆಂದೋಲನ ಕಾರ್ಯಕ್ರಮದಲ್ಲಿ ಕೈಗೊಳ್ಳಲಾದ ಚಟುವಟಿಕೆಗಳ ಫೋಟೋಗಳು, ಬಳಸಲಾದ ಕರಪತ್ರ, ಸ್ಟಿಕ್ಕರ್ಸ್, ಬ್ರೋಚರ್ಸ್‌ಗಳು, ಪೇಪರ್ ಕಟಿಂಗ್ಸ್ ಹಾಗೂ ದಾಖಲಾದ ಮಕ್ಕಳ ಅಂಕಿ-ಅಂಶದೊಂದಿಗೆ ವರದಿಯನ್ನು ಸಲ್ಲಿಸುವುದು.

8.1 ದಿನಾಂಕ **16.05.2017 ರಿಂದ 31.05.2017** ರವರೆಗೆ ಆಯೋಜಿಸಲಾದ ವಿಶೇಷ ದಾಖಲಾತಿ ಆಂದೋಲನದ ವರದಿಯನ್ನು **ದಿನಾಂಕ: 02.06.2017**ರೊಳಗೆ ಸಲ್ಲಿಸುವುದು.

8.2 **ದಿನಾಂಕ: 01.06.2017 ರಿಂದ 30.06.2017 ರವರೆಗೆ** ನಡೆಸಲಾದ ಸಾಮಾನ್ಯ ದಾಖಲಾತಿ ಆಂದೋಲನದ ವರದಿಯನ್ನು ದಿನಾಂಕ: **08.07.2017**ರೊಳಗೆ ಪೂರ್ಣ ಮಾಹಿತಿಯೊಂದಿಗೆ ರಾಜ್ಯ ಯೋಜನಾ ನಿರ್ದೇಶಕರ ಕಛೇರಿಗೆ ಸಲ್ಲಿಸುವುದು

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ,
ಬೆಂಗಳೂರು.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು.

**ಕ್ರಮಕ್ಕಾಗಿ**

1. ರಾಜ್ಯದ ಎಲ್ಲಾ ಡಿಡಿಪಿಐ (ಆಡಳಿತ) ಮತ್ತು ಡಿಡಿಪಿಐ (ಅಭಿವೃದ್ಧಿ),ಡಿ.ವೈ.ಪಿ.ಸಿ ಯವರಿಗೆ
2. ಈ ಸುತ್ತೋಲೆಯ ಪ್ರತಿಗಳನ್ನು ಡಿ.ಡಿ.ಪಿ.ಐ (ಆಡಳಿತ) ಕಛೇರಿ ಮುಖಾಂತರ ಜಿಲ್ಲೆಯ ಎಲ್ಲಾ ಬಿ.ಇ.ಒ/ಬಿಆರ್.ಸಿ/ಸಿಆರ್‌ಪಿ ಹಾಗೂ ಶಾಲಾ ಮುಖ್ಯ ಶಿಕ್ಷಕರಿಗೆ ರವಾನಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

**ಮಾಹಿತಿಗೆ ಮತ್ತು ಕ್ರಮಕ್ಕಾಗಿ**

1. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ
2. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಸಾ.ಶಿ.ಇಲಾಖೆ, ಬೆಂಗಳೂರು
3. ನಿರ್ದೇಶಕರು (ಪ್ರೌಢ ಶಿಕ್ಷಣ) ಸಾ.ಶಿ.ಇಲಾಖೆ, ಬೆಂಗಳೂರು
4. ನಿರ್ದೇಶಕರು ಡಿ.ಎಸ್.ಇ.ಆರ್.ಟಿ, ಬನಶಂಕರಿ,ಬೆಂಗಳೂರು.
5. ನಿರ್ದೇಶಕರು (ಅಲ್ಪಸಂಖ್ಯಾತ ಭಾಷಾ ಶಾಲೆಗಳು) ಸಾ.ಶಿ.ಇಲಾಖೆ, ಬೆಂಗಳೂರು
6. ಸಹನಿರ್ದೇಶಕರು ಸಾ.ಶಿ.ಇಲಾಖೆ, ಬೆಂಗಳೂರು, ಬೆಳಗಾವಿ, ಗುಲ್ಬರ್ಗಾ, ಮೈಸೂರುವಿಭಾಗಗಳು.
7. ಈ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ ಹಾಗೂ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ಅನುಪಾಲನಾ ಕ್ರಮಕ್ಕಾಗಿ

**ಮಾಹಿತಿಗಾಗಿ ಸಲ್ಲಿಸಿದೆ.**

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು
2. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಸದರಿ ಕಾರ್ಯಕ್ರಮದಮೇಲುಸ್ತುವಾರಿ ಮಾಡಿ ಯಶಸ್ವಿಗೊಳಿಸಲುಕೋರಿದೆ.
3. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರಿಗೆ ಮಾಹಿತಿಗಾಗಿ ಹಾಗೂ ಸದರಿ ಕಾರ್ಯಕ್ರಮದ ಯಶಸ್ವಿಗಾಗಿ ಸೂಕ್ತ ಕ್ರಮ ಕೈಗೊಳ್ಳಲು ಕೋರಿದೆ.

**ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಸಾ.ಶಿ. ಇಲಾಖೆ, ಇವರುಗಳಿಗೆ**

2017–18ನೇ ಸಾಲಿನ ಸಮವಸ್ತ್ರ, ಪಠ್ಯಪುಸ್ತಕ, ಬೈಸಿಕಲ್‌ಗಳನ್ನು ಮಕ್ಕಳಿಗೆ ವಿತರಿಸುವ ಸಂಬಂಧ ಜೂನ್ 2 ನೇ ವಾರದಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಒಂದೊಂದು ಶಾಲೆಯಲ್ಲಿ ವಿತರಣಾ ಸಮಾರಂಭ ಏರ್ಪಡಿಸಬೇಕಿದೆ.ಶಾಲೆಯ ಆಯ್ಕೆಯನ್ನು ಈ ಕೆಳಗಿನ ಮಾನದಂಡಗಳಿಗನುಗುಣವಾಗಿ ಆಯ್ಕೆ ಮಾಡಿ ಪಟ್ಟಿಯನ್ನು ಇಂದೇ ಇ-ಮೇಲ್ ಮೂಲಕ ಕಳುಹಿಸಲು ತಿಳಿಸಿದೆ.

1. ಒಂದೇ ಜನ ವಸತಿ ಪ್ರದೇಶದಲ್ಲಿ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಿರಬೇಕು.
2. ಈ ಮೂರೂ ಶಾಲೆಗಳಲ್ಲಿ ಯಾವ ಶಾಲೆಯಲ್ಲಿ ವಿತರಣಾ ಸಮಾರಂಭ ಏರ್ಪಡಿಸಲು ಅನುಕೂಲವಿದೆಯೋ ಆ ಶಾಲೆಯ ಹೆಸರು ನಮೂದಿಸಬೇಕು.
3. ಈ ಸಮಾರಂಭವು ವಿಧಾನಸಭಾ ಸದಸ್ಯರ ನೇತೃತ್ವದಲ್ಲಿ ನಡೆಯಬೇಕಿದ್ದು, ಸ್ಥಳೀಯ ಎಲ್ಲಾ ಜನಪ್ರತಿನಿಧಿಗಳು ಪಾಲ್ಗೊಳ್ಳುವಂತೆ ನೋಡಿಕೊಳ್ಳಬೇಕು.
4. ಶಾಲೆಯ ಆಯ್ಕೆ, ದಿನಾಂಕ ನಿಗದಿ, ಜನಪ್ರತಿನಿಧಿಗಳಿಗೆ ಆಹ್ವಾನ ಕಾರ್ಯಗಳನ್ನು ಖುದ್ದು ಕ್ಷೇತ್ರ ಶಿಕ್ಷಣಾಧಿಕಾರಿಗಳು ನಿರ್ವಹಿಸಿ, ಈ ಕೆಳಗಿನ ನಮೂನೆಯಲ್ಲಿ ಮೇಲ್ ಮೂಲಕ ಕಳುಹಿಸುವುದು.

| ಕ್ರ. ಸಂ | ಜಿಲ್ಲೆಯ ಹೆಸರು | ಬ್ಲಾಕ್‌ನ ಹೆಸರು | ವಿಧಾನಸಭಾ ಕ್ಷೇತ್ರದ ಹೆಸರು | ಆಯ್ಕೆ ಮಾಡಿದ ಶಾಲೆ/ಕಾಲೇಜಿನ ಹೆಸರು ಮತ್ತು ವಿಳಾಸ | ಈ ಶಾಲೆ/ಕಾಲೇಜಿನ ಮಕ್ಕಳ ಒಟ್ಟು ಸಂಖ್ಯೆ | | | |
|---|---|---|---|---|---|---|---|---|
| | | | | | ಪ್ರಾಥಮಿಕ | ಪ್ರೌಢ | ಪದವಿಪೂರ್ವ | ಒಟ್ಟು |
| | | | | | | | | |
| | | | | | | | | |

ವಿ.ಸೂ: ಉಪನಿರ್ದೇಶಕರು (ಆಡಳಿತ) ಇವರು ಜಿಲ್ಲಾ ಹಂತದಲ್ಲಿ ಕ್ರೋಢೀಕರಿಸಿದ ನಮೂನೆಯನ್ನು ಇ-ಮೇಲ್ ಮೂಲಕ ssaoosc@yahoo.co.inಗೆ ಇಂದೇ ಕಳುಹಿಸುವುದು.